# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 333+334 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) (ವಿಧಾನ ಪರಿಷತ್ತಿನ ಸದಸ್ಯರು) |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | 12-07-2018 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2018-19ನೇ ಸಾಲಿನಲ್ಲಿ ಎ.ಐ.ಸಿ.ಟಿ.ಇ. ಸಂಸ್ಥೆಯ ವತಿಯಿಂದ ತಾಂತ್ರಿಕ ಕೋರ್ಸ್‌ಗಳನ್ನು ಖಾಸಗಿ ವಿಶ್ವವಿದ್ಯಾಲಯಗಳು, ಡೀಮ್ಡ್ ವಿಶ್ವವಿದ್ಯಾಲಯಗಳು ವಿವಿಧ ಕೋರ್ಸ್‌ಗಳಿಗೆ ಮಾನ್ಯತೆಯನ್ನು ಪಡೆಯಲಾಗಿದೆಯೇ; | ಖಾಸಗಿ ವಿಶ್ವವಿದ್ಯಾಲಯಗಳು ಸೇರಿದಂತೆ, ರಾಜ್ಯ ಸರ್ಕಾರದ ಕಾನೂನಿನಡಿ ಸ್ಥಾಪಿಸಲ್ಪಟ್ಟು, ಯುಜಿಸಿ ಅಧಿನಿಯಮ 1956ರ ಪ್ರಕರಣ 2(ಎಫ್) ರನ್ವಯ **"ವಿಶ್ವವಿದ್ಯಾಲಯ"** ಎಂಬ ಪರಿಭಾಷೆಗೊಳಪಡುವ ವಿಶ್ವವಿದ್ಯಾಲಯಗಳು ತಾಂತ್ರಿಕ ಕೋರ್ಸುಗಳನ್ನು/ ವಿಭಾಗಗಳನ್ನು ಆರಂಭಿಸಲು, ಮುಚ್ಚಲು ಮತ್ತು ತಾಂತ್ರಿಕ ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು ಬದಲಾಯಿಸಲು ಎ.ಐ.ಸಿ.ಟಿ.ಇ ಪೂರ್ವಾನುಮತಿಯನ್ನು ಪಡೆಯುವ ಅವಶ್ಯಕತೆ ಇರುವುದಿಲ್ಲವೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು Bharathidasan University & Another Vs AICTE & Others [2001 8 SCC 676] ಪ್ರಕರಣದಲ್ಲಿ ಪ್ರತಿಪಾಧಿಸಿರುತ್ತದೆ.<br>ಈ ಹಿನ್ನೆಲೆಯಲ್ಲಿ ಸರ್ಕಾರಿ ಸ್ವಾಮ್ಯದ/ಖಾಸಗಿ ವಿಶ್ವವಿದ್ಯಾಲಯಗಳು ತಾಂತ್ರಿಕ ಕೋರ್ಸುಗಳನ್ನು/ ವಿಭಾಗಗಳನ್ನು ಆರಂಭಿಸಲು, ಮುಚ್ಚಲು ಮತ್ತು ತಾಂತ್ರಿಕ ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು ಬದಲಾಯಿಸಲು ಎ.ಐ.ಸಿ.ಟಿ.ಇ ಪೂರ್ವಾನುಮತಿಯನ್ನು ಪಡೆಯುವ ಅವಶ್ಯಕತೆ ಇರುವುದಿಲ್ಲ. . ಆದರೆ ತಾಂತ್ರಿಕ ಶಿಕ್ಷಣದ ಸಂಬಂಧದಲ್ಲಿ ಎ.ಐ.ಸಿ.ಟಿ.ಇ. ಯಿಂದ ನಿಗದಿಪಡಿಸಲಾದ ಮಾನದಂಡಗಳು ಹಾಗೂ ಗುಣಮಟ್ಟವನ್ನು ವಿಶ್ವವಿದ್ಯಾಲಯಗಳು ಪಾಲಿಸಬೇಕಾಗುತ್ತದೆ.<br>ಆದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ:17869-17870/2017ರ ಪ್ರಕರಣಗಳಲ್ಲಿ ನೀಡಿರುವ ತೀರ್ಪು ಡೀಮ್ಡ್ ವಿಶ್ವವಿದ್ಯಾಲಯಗಳು ಹೊಸದಾಗಿ ತಾಂತ್ರಿಕ ಶಿಕ್ಷಣ ವಿಭಾಗಗಳು/ಕಾರ್ಯಕ್ರಮಗಳನ್ನು ಆರಂಭಿಸಲು ಎ.ಐ.ಸಿ.ಟಿ.ಇಯ ಪೂರ್ವಾಮತಿಯನ್ನು ಪಡೆಯುವುದನ್ನು ಅಗತ್ಯಪಡಿಸುತ್ತದೆ. ಆದರೆ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಸಲಹೆಯ ಮೇರೆಗೆ ಕೇಂದ್ರ ಸರ್ಕಾರದಿಂದ ಯುಜಿಸಿ ಅಧಿನಿಯಮ-1956ರ ಪ್ರಕರಣ (3)ರನ್ವಯ Deemed to be Universities ಗಳನ್ನು ಸ್ಥಾಪಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ Deemed to be Universities ಗಳು ರಾಜ್ಯ ಸರ್ಕಾರದ ಆಡಳಿತ ನಿಯಂತ್ರಣಕ್ಕೊಳಪಡುವುದಿಲ್ಲ. |

| | | |
|---|---|---|
| ಆ) | ಹಾಗಿದ್ದಲ್ಲಿ, ವಿವಿಧ ಕೋರ್ಸ್‌ಗಳಿಗೆ ಮಾನ್ಯತೆ ಪಡೆದ ಖಾಸಗಿ ವಿಶ್ವವಿದ್ಯಾಲಯಗಳ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳ ಕೋರ್ಸ್‌ಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು) | ಉದ್ಭವಿಸುವುದಿಲ್ಲ. |
| ಇ) | ಶಾಸನ ಬದ್ಧ ಸಂಸ್ಥೆಗಳಿಂದ ಸರ್ಕಾರಿ ಮತ್ತು ಖಾಸಗಿ ವಿಶ್ವವಿದ್ಯಾಲಯಗಳ ಪ್ರೊಫೆಷನಲ್ ಕೋರ್ಸ್‌ಗಳಾದ ಇಂಜಿನಿಯರಿಂಗ್, ಮ್ಯಾನೇಜಮೆಂಟ್, ಆರ್ಕಿಟೆಕ್ಟ್, ಮೆಡಿಕಲ್ ಮತ್ತು ಡೆಂಟಲ್ ಕೋರ್ಸ್‌ಗಳಿಗೆ ಅನುಮೋದನೆ ಪಡೆದಿರುವುದನ್ನು ರಾಜ್ಯ ಸರ್ಕಾರ ಖಾತರಿಪಡಿಸಿದೆಯೇ; | ಉದ್ಭವಿಸುವುದಿಲ್ಲ. |
| ಈ) | ಹಾಗಿದ್ದಲ್ಲಿ, ಅನುಮೋದನೆ ಪಡೆದ ಸರ್ಕಾರಿ ಮತ್ತು ಖಾಸಗಿ ವಿಶ್ವವಿದ್ಯಾಲಯಗಳು ಯಾವುವು? (ಸಂಪೂರ್ಣ ಮಾಹಿತಿ ನೀಡುವುದು) | ಸರ್ಕಾರಿ ವಿಶ್ವವಿದ್ಯಾಲಯಗಳು ಕೋರ್ಸುಗಳನ್ನು ಸಂದರ್ಭಾನುಸಾರ ಎ.ಐ.ಸಿ.ಟಿ.ಇ. ಅಥವಾ ಯುಜಿಸಿ ವಿನಿಯಮಗಳು ಹಾಗೂ ರಾಷ್ಟ್ರೀಯ ಅಧಿಮಾನ್ಯತಾ ಸಂಸ್ಥೆಗಳ ಮಾರ್ಗಸೂಚಿಗಳು/ ಮಾನದಂಡಗಳನುಸಾರ ನಡೆಸ ಬೇಕಾಗುತ್ತದೆ.<br><br>ಅದೇ ರೀತಿಯಲ್ಲಿ, ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಖಾಸಗಿ ವಿಶ್ವವಿದ್ಯಾಲಯಗಳು ನಡೆಸುವ ಎಲ್ಲಾ ಕೋರ್ಸುಗಳು ಆಯಾ ಅಧಿನಿಯಗಳಲ್ಲಿ ಗೊತ್ತುಪಡಿಸಿದಂತೆ ರಾಷ್ಟ್ರೀಯ ಅಧಿಮಾನ್ಯತಾ ಸಂಸ್ಥೆಗಳ ವಿನಿಯಮಗಳಿಗೆ ಹಾಗೂ ಮಾನದಂಡಗಳಿಗೆ ಅನುಗುಣವಾಗಿರಬೇಕಾಗುತ್ತದೆ. |

**ಸಂಖ್ಯೆ: ಇಡಿ 277 ಯುಆರ್‌ಸಿ 2018**

(ಜಿ.ಟಿ. ದೇವೇಗೌಡ)
ಉನ್ನತ ಶಿಕ್ಷಣ ಸಚಿವರು